ಅಧಿಕೃತವಾಯಿತು ಎಂಬುದಾಗಿ ನಂಜರಾಜ ಗರ್ವದಿಂದ ಹೇಳುತ್ತಿದ್ದ.

ಇಡೀ ಊರಿಗೂರೇ ಆ ಸೂಳೆಪುರ ಎಂಬ ಹೆಸರನ್ನು ತಿರಸ್ಕಾರದಿಂದ ಕಂಡರೂ ನಂಜರಾಜ ಮುದುಕನಿಗೆ ಮಾತ್ರ ಆ ಹೆಸರಿನ ಬಗೆಗೆ ಬಹಳ ಪ್ರೀತಿಯಿತ್ತು. ಆತ ಎರಡು ಹೊತ್ತಿನ ಊಟಕ್ಕೆ ಲಾಟರಿ ಹೊಡೆಯುತ್ತಿದ್ದರೂ ಸಹ ಈ ಕತೆಯನ್ನು ಹೇಳುವಾಗಲೆಲ್ಲಾ ಗತ್ತಿನಿಂದ ಮೀಸೆಯನ್ನು ತಿರುವುತ್ತಾ, ತನ್ನದು ರಾಜನ ವಂಶವೆಂದು ಎದೆಯುಬ್ಬಿಸಿ ಹೇಳುತ್ತಿದ್ದ. ಆ ಊರಿನ ಇತಿಹಾಸದ ಬಗ್ಗೆ ಯಾರಿಗೂ ಗೊತ್ತಿಲ್ಲದ ಕಾರಣ ನಂಜರಾಜಪ್ಪ ಹೇಳಿದ್ದೇ ನಿಜವಿರಬಹುದೆಂಬ ಅನುಮಾನವಿತ್ತು. ಊರಿನ ಹೆಸರಿನ ಇತಿಹಾಸ ಕಟ್ಟಿಕೊಂಡು ಯಾರಿಗೆ ಏನೂ ಆಗಬೇಕಿರಲಿಲ್ಲ ಆದರೆ ಆ ಹೆಸರಿನಿಂದ ಮಾತ್ರ ಎಲ್ಲರೂ ಮುಕ್ತಿಯನ್ನು ಬೇಡುತ್ತಿದ್ದರು.

ಊರಿನ ಹೆಸರಿನಿಂದಾಗಿ ಜನಗಳಿಗಾಗುತ್ತಿದ್ದ ತಾಪತ್ರಯಗಳು ಒಂದೆರಡಲ್ಲ. ಎಲ್ಲಿಂದಲೋ ಊರಿಗೆ ಬರುವವರು ಬಸ್ಸಿನಲ್ಲಿ ಟಿಕೆಟ್ ತೆಗೆದುಕೊಳ್ಳುವಾಗ ಕಂಡಕ್ಟರ್, 'ಎಲ್ಲಿಗೆ?' ಎಂದು ಕೇಳಿದರೆ, ಎಷ್ಟೇ ನಿಧಾನವಾಗಿ ಅವನಿಗೊಬ್ಬನಿಗೆ ಕೇಳಿಸುವಂತೆ 'ಸೂಳೆ' ಎಂದು ಮೆಲುವಾಗಿ, 'ಪುರ' ಎಂಬುದನ್ನು ಮಾತ್ರ ಜೋರಾಗಿ ಹೇಳಿದರೂ, ಕಂಡಕ್ಟರ್ ಮಾತ್ರ "ಯಾವ 'ಪುರ'? ರಾಮಾಪುರನಾ?, ಸೋಮಪುರನಾ? ಅಥವಾ ಸೂಳೆಪುರನಾ?" ಎಂದು ಕೇಳುತ್ತಿದ್ದ. ಆ ರೀತಿಯ ಊರು ಇದೆ ಎಂದು ಕಲ್ಪಿಸಿರದಿದ್ದ ಅಥವಾ ಆ ಊರಿನ ಹೆಸರನ್ನು ಎಂದೂ ಕೇಳಿರದಿದ್ದವರೆಲ್ಲಾ ಒಮ್ಮೆ ತಿರುಗಿ, ಹಾಗೆ ಹೇಳಿದವರನ್ನು ವಿಚಿತ್ರ ದೃಷ್ಟಿಯಿಂದ ನೋಡುತ್ತಿದ್ದರು. ಆಗ ಎಲ್ಲರ ಮುಂದೆ ಆ ಊರಿನ ಹೆಸರನ್ನು ಜೋರಾಗಿ ಹೇಳಿಸಿದ ಕಂಡಕ್ಟರ್‌ನನ್ನು ಮನಸ್ಸಿನಲ್ಲೇ ಬಯ್ಯುತ್ತಾ, ಮುಜುಗರದಿಂದ ಮುದುರಿ ಕುಳಿತುಕೊಳ್ಳುವಂತಾಗುತ್ತಿತ್ತು. ಅದರಲ್ಲೂ ಹೆಂಗಸರಿಗೆ ಬಸ್ಸುಗಳಲ್ಲಿ ಎಲ್ಲರೆದುರು ಆ ಹೆಸರನ್ನು ಹೇಳಬೇಕಾದಾಗ ತೀರಾ ಸಂಕೋಚವಾಗುತ್ತಿತ್ತು. ಒಮ್ಮೆ ಪಾಸ್‌ಪೋರ್ಟ್ ಮಾಡಿಸಲು ಬೆಂಗಳೂರಿಗೆ ಹೋಗಿದ್ದ ಈ ಹಳ್ಳಿಯ ಯುವತಿಗೆ, ಎಲ್ಲಾ ಕೌಂಟರಿನಲ್ಲಿಯೂ ಅವಳ ಊರಿನ ಹೆಸರು ನೋಡಿದಾಕ್ಷಣ ಆಶ್ಚರ್ಯದಿಂದ, 'ಸೂಳೆಪುರ ಅಂತ ಯಾರ್‍ರೀ ಈ ಊರಿಗೆ ಹೆಸ್ರು ಇಟ್ಟಿದ್ದು?' ಎಂದು ಕುಚೋದ್ಯದಿಂದ ಕೇಳಿದಾಕ್ಷಣ ಆ ವಿಶಾಲವಾದ ಹಾಲ್‌ನಲ್ಲಿ ಕುಳಿತ್ತಿದ್ದವರೆಲ್ಲಾ ಇವಳ ಕಡೆ ತಿರುಗಿ ನೋಡಿದಾಗ, ಅವಳಿಗೆ 'ಈ ಭೂಮಿ ಬಾಯಿತೆರೆದು ಈಗಲೇ ನನ್ನನ್ನು ನುಂಗಬಾರದೇ?' ಎಂದೆನಿಸಿತ್ತು. ಆದರೂ ಸಾವರಿಸಿಕೊಂಡು, 'ಆ ಹೆಸರು ನಾನು ಇಟ್ಟಿರೋದಲ್ಲಾ, ಆ ಹೆಸರಿನ ಊರಿನಲ್ಲಿ ನಾನು ಹುಟ್ಟಿದ್ದೇನೆ ನನ್ನ ಕರ್ಮಕ್ಕೆ' ಎಂದು ಅಧಿಕಾರಿಯ ಮುಖಕ್ಕೆ ಹೊಡೆದಂತೆ ಉತ್ತರಿಸಿದಳಂತೆ. ಇನ್ನು ಈ ಊರಿನ ಯುವಕ–ಯುವತಿಯರಿಗೆ ಮದುವೆಗೆ ಹೆಣ್ಣು–ಗಂಡು ಸಿಗುವುದೇ ಕಷ್ಟವಾಗತೊಡಗಿತು. ಏಕೆಂದರೆ ಯಾವ ತಂದೆ–ತಾಯಿಗೆ ತಾನೇ 'ನಮ್ಮ ಮಗಳನ್ನು ಸೂಳೆಪುರಕ್ಕೆ ಕೊಟ್ಟಿದ್ದೇವೆ' ಎಂದೋ ಅಥವಾ 'ಸೂಳೆಪುರದಿಂದ ನಮ್ಮ ಮಗನಿಗೆ ಹೆಣ್ಣು ತಂದಿದ್ದೇವೆ' ಎಂದೋ ಹೇಳಲು ಸಾಧ್ಯ? ಆದ್ದರಿಂದ ಆ ಊರಿನಲ್ಲಿ ಎಲ್ಲರಿಗೂ ಒಂದಲ್ಲ ಒಂದು ರೀತಿಯ ಅವಮಾನಕರ ಫ್ಲಾಷ್‌ಬ್ಯಾಕ್‌ಗಳಿದ್ದವು. ಹಾಗಾಗಿ ಎಲ್ಲರೂ ಆ ಊರಿನ ಹೆಸರೆತ್ತಿದರೆ ಹಲ್ಲು ಕಡಿಯುತ್ತಿದ್ದರು. ಹೀಗೆ ಊರಿನ ಒಕ್ಕೊರಲಿನ ಒತ್ತಾಯದ ಪರಿಣಾಮವಾಗಿ ಆ ಊರಿನ ಹೆಸರನ್ನು ಬದಲಾಯಿಸಲು ಆ ದಿನ ಸಭೆ ಕರೆಯಲಾಗಿತ್ತು.

ಸಭೆ ಶುರುವಾಗುತ್ತಿದ್ದಂತೆ ಊರಿನ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಭೋಜೇಗೌಡರು ವೇದಿಕೆಯ ಮೇಲೆ ಮಧ್ಯದ ಕುರ್ಚಿಯಲ್ಲಿ ಮತ್ತು ಊರಿನ ಇತರೆ ಗಣ್ಯರೆಲ್ಲಾ ಅವರ ಅಕ್ಕಪಕ್ಕದ ಕುರ್ಚಿಗಳಲ್ಲಿ ಆಸೀನರಾದರು. ಭೋಜೇಗೌಡರು ಕಿಕ್ಕಿರಿದು ತುಂಬಿದ್ದ ಸಭೆಗೆ ನಮಸ್ಕರಿಸಿ, ಶಿವರಾಮರೆಡ್ಡಿಗೆ ಮಾತನಾಡಲು ಸೂಚಿಸಿದರು. ಶಿವರಾಮ ಇತ್ತೀಚೆಗೆ ಪ್ರವರ್ಧಮಾನಕ್ಕೆ ಬರುತ್ತಿದ್ದ ಕವಿ ಮತ್ತು ಕ್ರಾಂತಿಕಾರಿಯೆಂದು ಗುರ್ತಿಸಿಕೊಂಡಿದ್ದ. ಆಗಾಗ ಈತನ ಕಥೆ–ಕವನಗಳು ನಿಯತಕಾಲಿಕೆ ಮತ್ತು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದು, ಊರಿನಲ್ಲಿ ಏನೇ ಸಭೆ–ಸಮಾರಂಭ ಇದ್ದರೂ ಅಲ್ಲೆಲ್ಲಾ ಶಿವರಾಮನ ಭಾಷಣ ಅಥವಾ ನಿರೂಪಣೆ ಇದ್ದೇ ಇರುತ್ತಿತ್ತು. ಶಿವರಾಮನು ತುಂಬಿದ ಸಭೆಯನ್ನು ನೋಡಿ, ಊರಿನ ಯಾವ ಕಾರ್ಯಕ್ರಮಕ್ಕೂ ಇಷ್ಟು ಜನ ಸೇರುತ್ತಿರಲಿಲ್ಲ, ಆದರೆ ಇಂದು ಇಷ್ಟು ಜನ

